ಇದ್ದರೆ ಕೂಡಲೇ ಅಲ್ಲಿಗೆ ನಿಯೋಜನೆ ಮಾಡುವುದಕ್ಕೆ ಆದೇಶ ಕೊಡುವುದಕ್ಕೆ ಹೇಳುತ್ತೇನೆ.

(ಐ) ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಕೊಲೆ ಪ್ರಕರಣಗಳು

+ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಅಧ್ಯಕ್ಷರೆ, ಕುಂದಾಪುರ ವಿಧಾನಸಭಾಕ್ಷೇತ್ರದಲ್ಲಿ ಕಳೆದ ಕೆಲವು ವರ್ಷಗಳ ಹಿಂದೆ ಆಗಿರತಕ್ಕ ಲಿಲ್ಲಿ ಡಿಸೋಜ, ಮಂಗಳೂರು, ಗುರುರಾಜ ಭಟ್, ಕೋಟೇಶ್ವರ, ಗಣಪ, ಮಡಿವಾಳ ಇವರ ಕೊಲೆ ಪ್ರಕರಣಗಳನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಲಾಯಿತು. ಸಿ.ಒ.ಡಿ ತನಿಖೆ ಯಾವ ಹಂತಕ್ಕೆ ಬಂತು ಎಂಬ ವಿಚಾರ ಇನ್ನೂ ಗೊತ್ತಿಲ್ಲ. ಏಕೆಂದರೆ ನಾವು ಸಿ.ಒ.ಡಿ. ತನಿಖೆಗೆ ಒಪ್ಪಿಸತಕ್ಕ ಮೂಲೋದ್ದೇಶ, ಯಾವುದೇ ರೀತಿಯಲ್ಲಿ ತನಿಖೆಯಾಗಿ ಅಪರಾಧಿಗಳನ್ನು ಪತ್ತೆಹಚ್ಚಬೇಕೆಂಬುದು. ಸಿ.ಒ.ಡಿ. ತನಿಖೆಯಿಂದ ಏನೂ ಪ್ರಯೋಜನವಾಗಿಲ್ಲವೆಂದು ಜನರ ಮನಸ್ಸಿಗೆ ಬಂದಿದೆ. ಏಕೆಂದರೆ ಸಿ.ಒ.ಡಿ ಬಂದರೆ ಮಾತ್ರ ಅಲ್ಲಿ ಕ್ರಮ ಕೈಗೊಳ್ಳುವುದು. ಸಿ.ಒ.ಡಿ.ಯವರು ಬರುತ್ತಾರೆ, ನಾವು ಇಲ್ಲಿ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ ಮೇಲೆ ಹೋಗುತ್ತಾರೆ. ಆನಂತರ ಬರುತ್ತಾರೆ. ಅವರ ಬಗ್ಗೆ ಪ್ರಾಮಾಣಿಕವಾದ ಕಾಳಜಿ ಇಲ್ಲ. ಅದರ ನಂತರ, ಕರಿಯ ಎಂಬ ಹರಿಜನ ಕೊಲೆಯಾಯಿತು. ಅದರ ಬಗ್ಗೆ ಕಳೆದ ಸಾರಿ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದೆ. ಮೊನ್ನೆ 4ನೇ ತಾರೀಕು ಪುಷ್ಪ ಕೋಟಿ ಎಂಬ ಮಹಿಳೆಯ ಕೊಲೆಯಾಯಿತು. ಅದರ ಮೂರನೇ ದಿವಸ 5ನೇ ತಾರೀಖು ಪ್ರಕಾಶ್ ಎಂಬುವವರ ಕೊಲೆಯಾಯಿತು. ಹಾಡುಹಗಲಲ್ಲೆ ಒಂದೂವರೆ ಗಂಟೆ ಸಮಯದಲ್ಲಿ ಕೊಲೆಯಾಯಿತು. ಇವತ್ತಿನವರೆಗೆ ಅಪರಾಧಿಗಳನ್ನು ಪತ್ತೆಹಚ್ಚುವುದಕ್ಕೆ ಆಗಿಲ್ಲ. ಹಾಡುಹಗಲು ಎಲ್ಲರ ಸಮ್ಮುಖದಲ್ಲಿ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲೇ ಆಗಿದೆ. ಆದುದರಿಂದ ಇಂಥ ಪ್ರಕರಣಗಳನ್ನು, ಒಂದು ಕೊಲೆ ಆದಮೇಲೆ ಮತ್ತೊಂದು ಕೊಲೆ ಆಗತಕ್ಕದ್ದನ್ನು ಮುಚ್ಚಿಹಾಕತಕ್ಕ ವ್ಯವಸ್ಥೆ ಆಗಬಾರದು. ಈ ಬಗ್ಗೆ ತಾವು ಏನು ಉದ್ದೇಶ ಇಟ್ಟುಕೊಂಡಿದ್ದೀರಿ? ಪ್ರಾಮಾಣಿಕವಾಗಿ ಕೊಲೆಗಾರರನ್ನು ಬಂಧಿಸತಕ್ಕ ಪ್ರಯತ್ನ ಮಾಡಬೇಕೆಂಬ ಮಾತನ್ನು ಮಾನ್ಯ ಅಧ್ಯಕ್ಷರ ಮೂಲಕ ಹೇಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಸಿ.ಒ.ಡಿ.ಗೆ ಒಪ್ಪಿಸಿರತಕ್ಕ ಪ್ರಕರಣಗಳಲ್ಲಿ ತನಿಖೆ ಮುಂದುವರಿದಿಲ್ಲ, ಅದು ಹಂತವನ್ನು ತಲುಪಿಲ್ಲವೆಂದು ಹೇಳುತ್ತಾರೆ. ನಿಜ, ಸ್ಥಳೀಯವಾಗಿರತಕ್ಕ ಪೊಲೀಸರು ಅದರಲ್ಲಿ ಯಾವ ಸಫಲತೆಯನ್ನು ಕಾಣಲಿಲ್ಲ; ನಾವು ಅದನ್ನು ಸಿ.ಒ.ಡಿಗೆ ಒಪ್ಪಿಸಿದೆವು. ಸಿ.ಒ.ಡಿ.ಗೆ ಒಪ್ಪಿಸಿ ಆದಮೇಲೆ ಅದಕ್ಕೆ ಇರತಕ್ಕ ಒಂದು ಟಾಸ್ಕ್‌ಫೋರ್ಸ್‌ನವರು ನೋಡಿ ಸಿ.ಒ.ಡಿ ಇಲಾಖೆಗೆ ಕಳುಹಿಸುತ್ತಾರೆ. ಅದು ಆದಮೇಲೆ ಒಂದು ಪ್ರಿಲಿಮಿನರಿ ಎನ್‌ಕ್ವೈರಿಗೆ ಬಂದಮೇಲೆ ಅಲ್ಲಿ ಅದನ್ನು

ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ತಾವು ಹೇಳಿರತಕ್ಕ ವಿಚಾರ ಯಾವುದು ಇದೆ ಅದನ್ನು ಸಿ.ಒ.ಡಿ. ಪೊಲೀಸರಿಗೆ ತಿಳಿಸಿ ಬೇಗನೆ ವಿಚಾರಣೆ ಮುಗಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವ ಹಾಗೆ ಮಾಡುತ್ತೇವೆ. ಬಾಕಿ ಇರತಕ್ಕ ಸರಣಿ ಕೊಲೆ ಪ್ರಕರಣ ಯಾವುದು ಇದೆ ಅದು ನಿಜ. ಕೆಲವು ಸಂದರ್ಭಗಳಲ್ಲಿ ಕೊಲೆ ಆಗುತ್ತದೆ. ಕೊಲೆ ಆದಾಗ ಕೆಲವು ಸಂದರ್ಭಗಳಲ್ಲಿ ಪತ್ತೆ ಹಚ್ಚುವುದಕ್ಕೆ ಕಷ್ಟ ಎಂಬುದು ನಮಗೆ ಗೊತ್ತಿದೆ. ಆ ಭಾಗದಲ್ಲಿರತಕ್ಕವರು ಆಗುವುದಿಲ್ಲ, ಹೊರಭಾಗದಿಂದ ಬರುತ್ತಿರತಕ್ಕದ್ದು, ಹೊರರಾಜ್ಯದಿಂದ ಬರುತ್ತಿರತಕ್ಕದ್ದು ಇರತಕ್ಕ ಸಂದರ್ಭಗಳಲ್ಲಿ ನಾವು ಈ ಚಾಲನೆಯನ್ನು ವ್ಯಾಪಕವಾಗಿ ಹಬ್ಬಿಸಬೇಕಾಗುತ್ತದೆ. ಈ ವಿಚಾರದಲ್ಲಿ ನಮ್ಮ ಸೌತ್ ಕೆನರಾದಲ್ಲಿರತಕ್ಕ ಎಸ್.ಪಿ.ಮತ್ತು ಡಿ.ಐ.ಜಿ. ಇವರಿಬ್ಬರಿಗೆ ನೀವು ಎತ್ತಿರತಕ್ಕ ವಿಚಾರವನ್ನು ಅವರ ಗಮನಕ್ಕೆ ತಂದು ಇದರ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಬೇಕೆಂಬ ಸೂಚನೆಯನ್ನು ಸರ್ಕಾರದ ಪರವಾಗಿ ಕೊಡುತ್ತೇನೆ.

ಒ) ಎಲೇಜ್ ನೋಟಿಫೈ ಆಗದೇ ಇರುವುದರಿಂದ ಗೇಣಿದಾರರಿಗೆ ಆಗುತ್ತಿರುವ ತೊಂದರೆ

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೆ, ಮೈಸೂರು ಪರ್ಸನಲ್ಸ್ ಅಂಡ್ ಮಿಸಲೇನಿಯಸ್ ಇನಾಮ್ಸ್ ಅಬಾಲಿಷನ್ ಆ್ಯಕ್ಟ್ 1954 ಜಾರಿಗೆ ಬಂದ ಸಂದರ್ಭದಲ್ಲಿ ಸೆಕ್ಷನ್ 3(1)ರ ಪ್ರಕಾರ 'the consequences of vesting of inam land with the state' ಎಂಬ ಕಲಮ್‌ನಲ್ಲಿ ಇವತ್ತು ಮೈಸೂರು ಗೆಜಿಟ್‌ನಲ್ಲಿ ಯಾವ ಹಳ್ಳಿ ಎಂದು ನೋಟಿಫೈ ಮಾಡುತ್ತಾರೆ ಆ ಹಳ್ಳಿ ನೋಟಿಫೈ ಆಗಬೇಕು. It is a mandatory provision. ಒಂದು ಹಳ್ಳಿ ನೋಟಿಫೈ ಆದಮೇಲೆ ಆ ಹಳ್ಳಿ ಆ ವ್ಯಾಪ್ತಿಯಲ್ಲಿ ಬರತಕ್ಕದ್ದು; ಇನಾಂ ರದ್ದಿಯಾತಿ ಅಪ್ಲೈ ಆಗತಕ್ಕ ಸಂದರ್ಭ ಇರುವುದರಿಂದ ಸರ್ಕಾರದವರು ಒಂದು ನೋಟಿಫಿಕೇಷನ್ ಇಶ್ಯೂ ಮಾಡಿದರು. 15-9-1956ರಲ್ಲಿ ನೋಟಿಫಿಕೇಷನ್ ಇಷ್ಯೂ ಮಾಡಿ ಇಡೀ ರಾಜ್ಯಾದ್ಯಂತ ಅನೇಕ ಹಳ್ಳಿಗಳು ಯಾವುದು ಆ ಕಾನೂನು ವ್ಯಾಪ್ತಿಯಲ್ಲಿ ಬರುತ್ತದೆಂಬ ಹಳ್ಳಿಗಳನ್ನು ನೋಟಿಫೈ ಮಾಡಿದ ಸಂದರ್ಭದಲ್ಲಿ, ಬೆಂಗಳೂರು ಕಸಬದಲ್ಲಿ ಬರತಕ್ಕ ಕೆ.ಜಿ.ಬ್ಯಾಡರಹಳ್ಳಿ ಎಂಬುದು ಒಂದು ನೋಟಿಫೈ ಆಗಿದೆ. ಕೆ.ಜಿ.ಬ್ಯಾಡರಹಳ್ಳಿ ಅಂದರೆ ಬೆಂಗಳೂರು ಕಸಬದಲ್ಲಿ 4 ಕೆ.ಜಿ.ಬ್ಯಾಡರಹಳ್ಳಿಗಳು ಬಂದು, ಒಂದು ಹಳ್ಳಿ ಸುಬೇದಾರ್ ಮೈಖೇಲ್ ಎಂಬುವವರು ಜೋಡಿದಾರರಾಗಿರತಕ್ಕದ್ದು, ಇನ್ನೊಂದು ರಾಜಮಹಲ್ ಬ್ಯಾಡರಹಳ್ಳಿ ಎಂದು. ಹೀಗೆ ಅನೇಕ ರೀತಿಯ ಬ್ಯಾಡರಹಳ್ಳಿಗಳು ಇರುವುದರಿಂದ ಯಾವ ಹಳ್ಳಿ ಸುಬೇದಾರ್ ಮೈಖೇಲ್ ಜೋಡಿದಾರರಾಗಿದ್ದ ವ್ಯಾಪ್ತಿಯಲ್ಲಿ ಬರತಕ್ಕ ಹಳ್ಳಿ ನೋಟಿಫೈ ಆಗಿದೆಯೇ ಇಲ್ಲವೇ ಎಂಬುದು ಅನುಮಾನಾಸ್ಪದವಾಗಿದೆ. ಆ ಸಂದರ್ಭದಲ್ಲಿ ಜೋಡಿದಾರರಾಗಿರತಕ್ಕ ಮೈಖೇಲ್ ಅವರು ಹೈಕೋರ್ಟ್‌ನ್ನು ಅಪ್ರೋಚ್ ಮಾಡಿದ ಸಂದರ್ಭದಲ್ಲಿ ಹೈಕೋರ್ಟ್ ಆದೇಶ ಈ ರೀತಿ ಇದೆ: